



ಗುಂಡ: ಆಪತ್ತಿಗೆ ಸಹಾಯ ಮಾಡಿದವನೇ ನಿಜವಾದ ಗೆಳೆಯ ಅಂತಾ ಒಂದು ಇಂಗ್ಲಿಷ್ ಗಾದೆ ಇದೇ ಗೊತ್ತೇನಯ್ಯಾ?

ಸೀನ: ಓಹ್ ಅದಾ ಗೊತ್ತು ಬಿಡು! ಅದ್ಸರಿ ಈಗ ಯಾರಿಗೆ ಬಂದಿದೆ ಆಪತ್ತು ?

ಗುಂಡ: ಅಯ್ಯೋ ಆಪತ್ತಿನ ವಿಚಾರ ಹೇಳೋಕೆ ಅಂತಾನೆ ಒಂದು ವಾರದಿಂದ ಕಾಯಿತಾ ಇದೀನಿ, ಎಲ್ಲಿ ಹಾಳಾಗಿ ಹೋಗಿದ್ದೇ...

ಸೀನ: ಹೋಗ್ಲಿ ಬಿಡಪ್ಪ ಈಗ ಯಾವ ಆಪತ್ತು ಬಂದಿದೆ ಅಂತಾ ಹೇಳಯ್ಯ?

ಗುಂಡ: ಈಗ ನನಗೆ ಅರ್ಜೆಂಟಾಗಿ ಐದು ಸಾವಿರ ರೂಪಾಯಿ ಸಾಲ ಕೊಡು!

ಗುಂಡ: ಬೆಳಿಗ್ಗೆ ನಮ್ಮ ಮನೆಯಿಂದ ಕಳ್ಳನ್ನ ಹಿಡ್ಕೊಂಡು ಬಂದ್ರಲಾ ಅವನ ಜೊತೆ ಒಂದು ಐದು ನಿಮಿಷ ಮಾತನಾಡಬೇಕು ಅವಕಾಶ ಮಾಡಿಕೊಡಿ, ಇಲ್ಲ ಎನ್ನಬೇಡಿ ಸಾರ್.

ಪೊಲೀಸ್: ಇಲ್ಲ. ಅದೆಲ್ಲಾ ಹಾಗೆ ಆಗಕಿಲ್ಲ. ಮೇಲಾಗಿ ನಿಮ್ಮನ್ನು ಒಳೀಕೆ ಬಿಡುವಂತೇ ಇಲ್ಲ. ಅದ್ಸರಿ ಆ ಕಳ್ಳನ ತಾವ ನೀವು ಏನು ಮಾತಾಡೋದು ಐತೆ?

ಗುಂಡ: ಅದಾ...? ನನ್ನ ಹೆಂಡತಿಗೆ ಒಂದು ಚೂರೂ ಗೊತ್ತಾಗದಹಾಗೆ ನಮ್ಮ ಮನೆ ಒಳಗೆ ಅದು ಹೆಂಗೆ ಹೋಗಿ ಬಂದ ಅಂತಾ ತಿಳ್ಕೋಬೇಕಾಗಿತ್ತು.

ಪೊಲೀಸ್: ಅದು ತಿಳ್ಕೊಂಡು ಏನ್ ಮಾಡ್ತೀರಾ?

ಗುಂಡ: ಲೈಟಾಗಿ ಗುಂಡು ಹಾಕಿ ಮನೆಗೆ ಹೋದಾಗ ಅದು ಹೆಂಗೋ ನನ್ ಹೆಂಡ್ತಿ ಕೈಗೇ ಸಿಕ್ಕುಬಿಡ್ತೀನಿ. ಅದ್ಕೇ ಅವನ ತಾವ ಆ ರಹಸ್ಯ ಕೇಳಬೇಕು.

***

ಸೀನ: ಯಾಕಯ್ಯ ಗುಂಡಾ, ತುಂಬಾ ಡಲ್ಲಾಗಿದ್ದೀ... ಏನ್ ಆಯ್ತು ಲಾಕ್ ಡೌನ್ ಎಫೆಕ್ಟಾ ?

ಗುಂಡ: ಇಲ್ಲಾ ಕಣಯ್ಯಾ ಲಾಕ್ಡೌನ್ ಓಪನ್ ಆದ ಮೇಲೆ ನನ್ ಫ್ರೆಂಡ್ ಸುಬ್ಬ ಪ್ಲಾಸ್ಟಿಕ್ ಸರ್ಜರಿ ಮಾಡಿಸ್ಕೊಬೇಕೂ ಅಂತ ಐವತ್ತು ಸಾವಿರ ರೂಪಾಯಿ ಸಾಲ ತಗೊಂಡು ಹೋಗಿದ್ದ! ಈಗ ನೋಡು ಅವನನ್ನ ಪತ್ತೆ ಮಾಡೋದೇ ಕಷ್ಟ ಆಗಿ ಬಿಟ್ಟಿದೆ.

ಸೀನ: ಅಯ್ಯೋ! ಅಂದರೆ ಸುಬ್ಬ ಊರು ಬಿಟ್ಟು ಓಡಿ ಹೋದನಾ ?

ಗುಂಡ: ಇಲ್ಲಾ ಕಣಯ್ಯಾ ಅವನು ಊರಲ್ಲಿಯೇ ಅವ್ನೇ! ನನ್ನ ಫಜೀತಿ ಏನಪ್ಪಾ ಅಂದ್ರೇ ಆ ಸುಬ್ಬನ ಮುಖ ಹೇಗೆ ಗುರ್ತು ಹಿಡಿಯೋದು?

***

ಡಾಕ್ಟರ್: ನೋಡಪ್ಪಾ... ನಿನ್ ಕಾಲಿಗೆ ತುಂಬಾ ಗಾಯ ಆಗಿ ರಕ್ತ ಬರ್ತಾ ಇದೆ. ಅದಷ್ಟು ಬೇಗ ಇದಕ್ಕೆ ತುಂಬಾ ನಾಜೂಕಾಗಿ ಹೊಲಿಗೆ ಹಾಕಬೇಕಾಗುತ್ತೆ ಅತೀ ಕಡಿಮೆ ಅಂದರೂ ಒಂದು ಹತ್ತು ಸಾವಿರ ಖರ್ಚಾಗುತ್ತೆ ಹೇಳು ಬೇಗ ಏನ್ ಮಾಡ್ಲಿ?

ಗುಂಡ: ಅಯ್ಯೋ ಅಷ್ಟೊಂದು ದುಡ್ಡಾ? ಹಾಗಾದ್ರೆ ನಾಜೂಕಾಗಿ ಬೇಡ ಬರೀ ಸಿಂಪಲ್ಲಾಗಿ ಹೊಲಿಗೆ ಹಾಕಿಬಿಡಿ. ಆಗ ಎಷ್ಟಾಗುತ್ತೆ ಹೇಳಿ ?

***

ಡಾಕ್ಟರ್: ನೀವು ಯಾವ ಪೇಸ್ಟ್ ಬಳಸ್ತೀರಾ?

ಗುಂಡ: ವಾಸು ಪೇಸ್ಟ್

ಡಾಕ್ಟರ್: ಹಲ್ಲು ಉಜ್ಜೋಕೆ ಯಾವ ಬ್ರಷ್ ಉಪಯೋಗಿಸುತ್ತೀರಾ ?

ಗುಂಡ : ವಾಸು ಟೂತ್ ಬ್ರಷ್

ಡಾಕ್ಟರ್ : ಯಾವ ಸೋಪು ಹಚ್ಕೋತೀರಾ?

ಗುಂಡ: ವಾಸು ಸೋಪ್

ಡಾಕ್ಟರ್: ಸರಿ.. ಸರಿ ಶೇವ್ ಮಾಡೋವಾಗ ಯಾವ ಕ್ರೀಮ್– ಬ್ಲೇಡ್ ಬಳಸುತ್ತೀರಿ?

ಗುಂಡ: ವಾಸು ಶೇವಿಂಗ್ ಕ್ರೀಮ್ ಮತ್ತು ಬ್ಲೇಡ್!

ಡಾಕ್ಟರ್: ಓಹ್ ವೆರಿ ಗುಡ್! ಅದ್ಸರಿ , ಎಲ್ಲಾ ಒಂದೇ ಬ್ರಾಂಡ್ ಬಳಸ್ತಾ ಇದ್ದೀರಾ ಒಳ್ಳೆಯ ಅಭ್ಯಾಸ. ಅದ್ಯಾಕೆ ಹಾಗೇ ನಿಮ್ ಹಲ್ಲು, ಮುಖ ಎಲ್ಲವೂ ಈ ಪಾಟಿ ಕೆಟ್ಟುಹೋಗಿದೆ? ಅದು ಒಳ್ಳೆಯ ಕಂಪನಿಯ ಉತ್ಪನ್ನಗಳು ತಾನೆ?

ಗುಂಡ: ಅಯ್ಯೋ, ಅದು ಕಂಪನಿ ಅಂತಾ ನಾನು ಎಲ್ಲಿ ಹೇಳ್ದೆ? ವಾಸು ಅಂದ್ರೇ ನನ್ನ ರೂಮೇಟ್ ಡಾಕ್ಟ್ರೇ.!

***

ಸೀನ: ಓಹೋ , ಗುಂಡಣ್ಣಾ ತುಂಬಾ ದಿನ ಆಯ್ತು ನಿನ್ನ ನೋಡಿ! ಅಂದಂಗೆ ಹೊಸ ಬಿಸಿನೆಸ್ಸ್ ಶುರು ಮಾಡಿದ್ದೀಯಂತೆ! ಲಾಕ್ ಡೌನ್ ಓಪನ್ ಆದ ಮೇಲೆ ಹೇಗೆ ನಡೀತಾ ಇದೆ?

ಗುಂಡ: ಅಯ್ಯೋ ಬಿಡು ನಿನಗೆ ಗೊತ್ತಿರೋ ಹಾಗೇ ನಾನು ಸಂಗೀತಗಾರ ಮತ್ತು ಗಾಯಕ. ಆಗೆಲ್ಲಾ ಬೇಕಾದಷ್ಟು ಕಾರ್ಯಕ್ರಮಗಳು ಇದ್ರೂ ದುಡ್ಡುಕೊಡ್ತಾ ಇದ್ದದ್ದು ತುಂಬಾ ಕಡಿಮೆ! ಬೇಕಾದಷ್ಟು ಶಾಲುಗಳನ್ನ ಹೊದಿಸಿ ನನಗೆ ಸನ್ಮಾನ ಮಾಡಿ ಕಳಿಸ್ತಾ ಇದ್ರು! ಆದ್ರೆ ಈ ಕೊರೊನಾ ಕಾಲ ಬಂದ ಮೇಲೆ ಅದಕ್ಕೂ ಕಲ್ಲು ಬಿತ್ತು.

ಸೀನ: ಹೋಗ್ಲಿ ಬಿಡು. ಕೊರೊನಾ ಟೈಮಿನಲ್ಲಿ ಎಲ್ಲರಿಗೂ ಹೀಗೇನೇ ತೊಂದರೆ ಆಯ್ತು. ಅದೇನು ಬಿಸಿನೆಸ್ ಅಂತಾ ಹೇಳಲೇ ಇಲ್ಲ?

ಗುಂಡ: ಓ ..ಅದಾ .. ? ಸನ್ಮಾನ ಮಾಡೋವಾಗ ತರಾವರಿ ಶಾಲುಗಳು ನನಗೆ ಬಂದಿವೆ. ಎಲ್ಲ ಕೂಡಿಟ್ಟಿದ್ದೆ. ಮನೇಲಿ ತುಂಬಾ ಸ್ಟಾಕ್ ಆಗಿತ್ತು. ಈಗ ಅವನ್ನೇ ತಂದು ಇಲ್ಲೇ ಅವೆನ್ಯೂ ರಸ್ತೆಯಲ್ಲಿ ಒಂದು ಅಂಗಡೀನೇ ಶುರು ಮಾಡಿದ್ದೇನೆ. ಈಗ ಚಳಿಗಾಲ ನೋಡು ಜೊತೆಗೆ ಕೊರೊನಾ ಭಯ ಕೂಡ ಇರುವುದರಿಂದ ಶಾಲುಗಳಿಗೆ ಡಿಮ್ಯಾಂಡ್ ಇದೆ ಕಣಪ್ಪ!

—ಆರ್. ವೀರೇಶ್ ಕುಮಾರ್ ಬೆಂಗಳೂರು


